# ನ.23: ಎನ್‌ಐಟಿಕೆ ಘಟಿಕೋತ್ಸವ

ಸಂ.ಕ.ಸಮಾಚಾರ, ಮಂಗಳೂರು

ಸುರತ್ಕಲ್‌ನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ(ಎನ್‌ಐಟಿಕೆ)ಯ 22ನೇ ವಾರ್ಷಿಕ ಘಟಿಕೋತ್ಸವ ನ.23ರಂದು ಸುರತ್ಕಲ ಎನ್‌ಐಟಿಕೆ ಸಿಲ್ವರ್ ಜುಬಿಲಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಎನ್‌ಐಟಿಕೆಯ ನಿರ್ದೇಶಕ ಪ್ರೊ.ಬಿ.ರವಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಘಟಿಕೋತ್ಸವ ಸಮಾರಂಭ ಎರಡು ಭಾಗಗಳಲ್ಲಿ ನಡೆಯಲಿದ್ದು, ಸ್ನಾತಕೋತ್ತರ (ಪಿಜಿ) ಮತ್ತು ಪಿಎಚ್.ಡಿ ವಿದ್ಯಾರ್ಥಿಗಳಿಗೆ ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಮತ್ತು ಪದವಿ (ಯುಜಿ) ವಿದ್ಯಾರ್ಥಿಗಳಿಗೆ ಮಧ್ಯಾಹ್ನ 3 ರಿಂದ ನಡೆಯಲಿದೆ. ಸ್ನಾತಕೋತ್ತರ ಘಟಿಕೋತ್ಸವದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದರು.

**2078 ವಿದ್ಯಾರ್ಥಿಗಳಿಗೆ ಪದವಿ:**

ಈ ವರ್ಷ ಎನ್‌ಐಟಿಕೆಯ 22ನೇ ವಾರ್ಷಿಕ ಘಟಿಕೋತ್ಸವದಲ್ಲಿ ಒಟ್ಟು 2078 ವಿದ್ಯಾರ್ಥಿಗಳು ಪದವಿ ಸ್ವೀಕರಿಸಲಿದ್ದಾರೆ. ಇದರಲ್ಲಿ 1002 ಬಿ.ಟೆಕ್ ಪದವಿಗಳು, 758 ಎಂ.ಟೆಕ್ ಮತ್ತು ಎಂ.ಟೆಕ್ (ಆರ್), 179 ಇತರ ಪಿಜಿ ವಿದ್ಯಾರ್ಥಿಗಳು, 139 ಪಿಎಚ್.ಡಿ ವಿದ್ಯಾರ್ಥಿಗಳು, 195 ಬಿ.ಟೆಕ್ ಪದವಿಗಳು ಮತ್ತು 5 ಬಿ.ಟೆಕ್ (ಆನರ್ಸ್) ಪದವಿಗಳು ಸೇರಿವೆ. 9ಬಿ.ಟೆಕ್ ವಿದ್ಯಾರ್ಥಿಗಳು ಮತ್ತು 31 ಸ್ನಾತಕೋತ್ತರ ವಿದ್ಯಾರ್ಥಿಗಳು ಅತ್ಯುನ್ನತ ಸಿಜಿಪಿಎ ಪಡೆಯಲು ನಾನಾ ಏಜೆನ್ಸಿಗಳು ಪ್ರಾಯೋಜಿಸಿದ ಸಂಸ್ಥೆಯ ಚಿನ್ನದ ಪದಕಗಳು ಮತ್ತು ಪದಕಗಳನ್ನು ಪಡೆಯಲಿದ್ದಾರೆ.

ಎನ್‌ಐಟಿಕೆಯ ಪ್ರೊ.ಅರುಣ್ ಇಸ್ಲೂರು, ಪ್ರೊ.ಸೈದಕ್ ದತ್ತ, ಪಿಆರ್‌ಒ ವೈಷ್ಣವಿ ಉಪಸ್ಥಿತರಿದ್ದರು.

Samyuktha Karnatak, Date:21/11/24, p, no - 06